5302 (6171) ಶ್ರೀ ಪ್ರಭಾಕರ ಬಂಗೇರ ಕೆ. (ಬೆಳ್ತಂಗಡಿ): ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಳ್ತಂಗಡಿ ತಾಲ್ಲೂಕು ವ್ಯಾಪ್ತಿಯಲ್ಲಿ ವಿದ್ಯುತ್ ಸಂಪರ್ಕವಿಲ್ಲದ ಗ್ರಾಮಗಳೆಷ್ಟು;

ಆ) ಈ ಉಪಗ್ರಾಮಗಳಿಗೆ ವಿದ್ಯುತ್ ಸಂಪರ್ಕದ ವ್ಯವಸ್ಥೆಯನ್ನು ಯಾವಾಗ ಮಾಡಿಕೊಡಲಾಗುವುದು;

ಇ) ಬೆಳ್ತಂಗಡಿ ತಾಲ್ಲೂಕಿನಲ್ಲಿ ವಿದ್ಯುತ್ ಸಂಪರ್ಕ ಪಡೆಯದೇ ಇರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಕಾಲೋನಿಗಳ ಸಂಖ್ಯೆ ಎಷ್ಟು;

ಈ) ಈ ಕಾಲೋನಿಗಳಿಗೆ ಆದ್ಯತೆಯ ಮೇರೆಗೆ ವಿದ್ಯುತ್ ಸಂಪರ್ಕವನ್ನು ಒದಗಿಸಿಕೊಡುವಲ್ಲಿ ಸರ್ಕಾರದ ಕ್ರಮಗಳೇನು?

ಶ್ರೀ ಹೆಚ್.ಡಿ.ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು):

ಅ) ಬೆಳ್ತಂಗಡಿ ತಾಲ್ಲೂಕಿನ ವ್ಯಾಪ್ತಿಯಲ್ಲಿ ವಿದ್ಯುತ್ ಸಂಪರ್ಕವಿಲ್ಲದ ಕಂದಾಯ ಗ್ರಾಮಗಳು ಇರುವುದಿಲ್ಲ. ಆದರೆ ಸದರಿ ತಾಲ್ಲೂಕಿನ ವ್ಯಾಪ್ತಿಯಲ್ಲಿ ಒಟ್ಟು 632 ಉಪಗ್ರಾಮಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಬೇಕಾಗಿದೆ.

ಆ) ವಿದ್ಯುತ್ ಸಂಪರ್ಕವಿಲ್ಲದ ಈ ಉಪಗ್ರಾಮಗಳ ಪೈಕಿ 85 ಉಪಗ್ರಾಮಗಳ ವಿದ್ಯುದೀಕರಣವನ್ನು ಟರ್ನ್‌ಕೀ ಆಧಾರದಲ್ಲಿ ಕೈಗೊಳ್ಳಲು ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡಿದ್ದು, ಅರ್ಹ ಗುತ್ತಿಗೆದಾರರಿಗೆ ಕಾಮಗಾರಿಗಳನ್ನು ಮಂಗಳೂರು ವಿದ್ಯುತ್ ಸರಬರಾಜು ಕಂಪನಿಯ 23–5–2005ರಲ್ಲಿ ವಹಿಸಿಕೊಟ್ಟಿರುತ್ತದೆ. ಕೇಂದ್ರ ಸರ್ಕಾರವು ನೂತನವಾಗಿ ಜಾರಿಗೆ ತಂದಿರುವ "ರಾಜೀವ್ ಗಾಂಧಿ ಗ್ರಾಮೀಣ ವಿದ್ಯುದೀಕರಣ ಯೋಜನೆ" ಯಡಿಯಲ್ಲಿ ಬಾಕಿ ಉಳಿದ 547 ಉಪಗ್ರಾಮಗಳನ್ನು ವಿದ್ಯುದೀಕರಿಸಲು ಮಂಗಳೂರು ವಿದ್ಯುತ್ ಸರಬರಾಜು ಕಂಪನಿಯು ಪ್ರಸ್ತಾವನೆಯನ್ನು ತಯಾರಿಸಿ, ಗ್ರಾಮೀಣ ವಿದ್ಯುದೀಕರಣ ನಿಗಮಕ್ಕೆ (ಆರ್.ಇ.ಸಿ) ಅನುಮೋದನೆಗಾಗಿ ಸಲ್ಲಿಸಿದೆ. ಗ್ರಾಮೀಣ ವಿದ್ಯುದೀಕರಣ ನಿಗಮದ ಅನುಮೋದನೆ ದೊರೆತ ನಂತರ ಈ ಉಪಗ್ರಾಮಗಳ ವಿದ್ಯುದೀಕರಣದ ಬಗ್ಗೆ ಮುಂದಿನ ಕ್ರಮಗಳನ್ನು ಮಂಗಳೂರು ವಿದ್ಯುತ್ ಸರಬರಾಜು ಕಂಪನಿಯು ತೆಗೆದುಕೊಳ್ಳುತ್ತದೆ.

ಇ) ಬೆಳ್ತಂಗಡಿ ತಾಲ್ಲೂಕಿನ ವ್ಯಾಪ್ತಿಯಲ್ಲಿ ವಿದ್ಯುತ್ ಸಂಪರ್ಕ ಪಡೆಯದೇ ಇರುವ ಪರಿಶಿಷ್ಟ ಜಾತಿಯ ಕಾಲೋನಿಗಳ ಸಂಖ್ಯೆ 24 ಪರಿಶಿಷ್ಟ ಪಂಗಡಗಳ ಕಾಲೋನಿಗಳ ಸಂಖ್ಯೆ 4.

ಈ) ಪರಿಶಿಷ್ಟ ಪಂಗಡಗಳ ಎರಡು ಕಾಲೋನಿಗಳ ವಿದ್ಯುದೀಕರಣದ ಕಾಮಗಾರಿಯನ್ನು ಮಂಗಳೂರು ವಿದ್ಯುತ್ ಸರಬರಾಜು ಕಂಪನಿಯು ಕಾಮಗಾರಿಯನ್ನು ತನ್ನ ವೆಚ್ಚದಲ್ಲಿಯೇ ಈಗಾಗಲೇ ಪ್ರಾರಂಭಿಸಿದ್ದು, ಕಾಮಗಾರಿಯು ಪ್ರಗತಿಯಲ್ಲಿದೆ. ಇನ್ನೆರಡು ಪರಿಶಿಷ್ಟ ಪಂಗಡಗಳ ಕಾಲೋನಿಗಳ ವಿದ್ಯುದೀಕರಣವನ್ನು "ಟರ್ನ್ ಕೀ" ಆಧಾರದಲ್ಲಿ ಕೈಗೊಳ್ಳಲು ಅರ್ಹ ಗುತ್ತಿಗೆದಾರರಿಗೆ ಕಾಮಗಾರಿಯನ್ನು 23–5–2005ರಲ್ಲಿ ಮಂಗಳೂರು ವಿದ್ಯುತ್ ಸರಬರಾಜು ಕಂಪನಿಯು ವಹಿಸಿಕೊಟ್ಟಿರುತ್ತದೆ.

ಪರಿಶಿಷ್ಟ ಜಾತಿಯ 24 ಕಾಲೋನಿಗಳ ವಿದ್ಯುದೀಕರಣವನ್ನು ಕೇಂದ್ರ ಸರ್ಕಾರವು ನೂತನವಾಗಿ ಜಾರಿಗೆ ತಂದಿರುವ "ರಾಜೀವ್ ಗಾಂಧಿ ಗ್ರಾಮೀಣ ವಿದ್ಯುದೀಕರಣ ಯೋಜನೆ" ಯಡಿಯಲ್ಲಿ ತೆಗೆದುಕೊಳ್ಳಲು ಮಂಗಳೂರು ವಿದ್ಯುತ್ ಸರಬರಾಜು ಕಂಪನಿಯು ಪ್ರಸ್ತಾವನೆಯನ್ನು ಸಿದ್ಧಪಡಿಸಿ, ಗ್ರಾಮೀಣ ವಿದ್ಯುದೀಕರಣ ನಿಗಮಕ್ಕೆ ಅನುಮೋದನೆಗಾಗಿ ಸಲ್ಲಿಸಿದೆ. ಗ್ರಾಮೀಣ ವಿದ್ಯುದೀಕರಣ ನಿಗಮದ ಅನುಮೋದನೆ ದೊರೆತ ನಂತರ ಮಂಗಳೂರು ವಿದ್ಯುತ್ ಸರಬರಾಜು ಕಂಪನಿಯು ಈ ಪರಿಶಿಷ್ಟ ಜಾತಿ ಕಾಲೋನಿಗಳ ವಿದ್ಯುದೀಕರಣದ ಬಗ್ಗೆ ಮುಂದಿನ ಕ್ರಮ ತೆಗೆದುಕೊಳ್ಳತ್ತದೆ.

5303 (6172) ಶ್ರೀ ಪ್ರಭಾಕರ ಬಂಗೇರ ಕೆ. (ಬೆಳ್ತಂಗಡಿ): ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಗ್ರಾಮೀಣ ಪ್ರದೇಶಗಳಿಗೆ ನಿರಂತರವಾಗಿ (24 ಗಂಟೆಗಳ ಕಾಲ) ಸಿಂಗಲ್ ಫೇಸ್ ವಿದ್ಯುತ್ ಸಂಪರ್ಕವನ್ನು ಒದಗಿಸಲು ಸರ್ಕಾರವು ತೀರ್ಮಾನವನ್ನು ಕೈಗೊಂಡಿದೆಯೇ;

ಆ) ಹಾಗಿದ್ದಲ್ಲಿ, ಆ ಕುರಿತಾದ ವಿವರಗಳೇನು;

ಇ) ಹಾಗಿಲ್ಲವಾದಲ್ಲಿ ಈ ಕುರಿತಾದ ಸರ್ಕಾರದ ನಿಲುವುಗಳೇನು;

ಈ) ಪ್ರತೀ ಗ್ರಾಮಕ್ಕೊಬ್ಬರಂತೆ ವಿದ್ಯುತ್ ಲೈನ್‌ಮ್ಯಾನ್‌ಗಳನ್ನು ಒದಗಿಸಲು ಸರ್ಕಾರ ಕ್ರಮ ಕೈಗೊಂಡಿದೆಯೇ;

ಉ) ಹಾಗಿಲ್ಲವಾದಲ್ಲಿ ಅದರ ಅಗತ್ಯತೆಯನ್ನು ಸರ್ಕಾರವು ಮನಗಂಡಿಲ್ಲವೇ;

ಊ) ಈ ವ್ಯವಸ್ಥೆಯನ್ನು ಮಾಡುವ ಕುರಿತು ಸರ್ಕಾರದ ಕ್ರಮಗಳೇನು;

ಋ) ಬೆಳ್ತಂಗಡಿ ತಾಲ್ಲೂಕಿನಲ್ಲಿ ಕರ್ತವ್ಯದಲ್ಲಿರುವ ಲೈನ್‌ಮ್ಯಾನ್‌ಗಳ ಸಂಖ್ಯೆ ಎಷ್ಟು;

ೠ) ಕೊರತೆ ಇರುವ ಲೈನ್ ಮ್ಯಾನ್‌ಗಳನ್ನು ತುಂಬಲು ಯಾವಾಗ ಕ್ರಮ ಕೈಗೊಳ್ಳಲಾಗುವುದು;

ಶ್ರೀ ಹೆಚ್.ಡಿ.ರೇವಣ್ಣ (ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು) :

ಅ) ಆ) ಮತ್ತು ಇ)

ಗ್ರಾಮೀಣ ಪ್ರದೇಶಗಳಿಗೆ ನಿರಂತರವಾಗಿ (24 ಗಂಟೆಗಳ ಕಾಲ) ಸಿಂಗಲ್ ಫೇಸ್ ವಿದ್ಯುತ್ ಸರಬರಾಜನ್ನು ಒದಗಿಸಲು ಇರುವ ಸಾಧ್ಯ_ಅಸಾಧ್ಯತೆಗಳನ್ನು ತಿಳಿಯಲು, ಪ್ರಯೋಗಾತ್ಮಕವಾಗಿ ಸಿಂಗಲ್ ಫೇಸ ವಿದ್ಯುತ್ ಸರಬರಾಜನ್ನು ರಾಜ್ಯದ ಕೆಳಕಂಡ ನಾಲ್ಕು ಸ್ಥಳಗಳಲ್ಲಿ (ಸಬ್ ಸ್ಟೇಷನ್‌ಗಳಲ್ಲಿ) ಜಾರಿಗೆ ತರಲಾಯಿತು.

1. ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ವ್ಯಾಪ್ತಿಯ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೊಸಕೋಟೆ ತಾಲ್ಲೂಕಿನ ನಂದಗುಡಿ 66 ಕೆ.ವಿ. ಸಬ್ ಸ್ಟೇಷನ್ ಮತ್ತು ತುಮಕೂರು ಜಿಲ್ಲೆ ತುರುವೇಕೆರೆ ತಾಲ್ಲೂಕು ಮಾಯಸಂದ್ರ 110 ಕೆ.ವಿ. ಸಬ್ ಸ್ಟೇಷನ್.

2. ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ವ್ಯಾಪ್ತಿಯ ಧಾರವಾಡ ಜಿಲ್ಲೆಯ ಕಲಘಟಗಿ ತಾಲ್ಲೂಕಿನ 33 ಕೆ.ವಿ. ಸಬ್ ಸ್ಟೇಷನ್.